## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

## S.C. No. 137/2020

| ಸಾಕ್ಷಿಯ ಹೆಸರು | ಶ್ರೀ. ಶ್ರೀನಿವಾಸ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಆನಂತಪ್ಪ | 19 | 12 |
| ವಯಸ್ಸು | 47 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **17.04.2026.** | |
| ಉದ್ಯೋಗ | ಎ.ಎಸ್.ಐ., ಕೆ.ಜಿ. ಹಳ್ಳಿ ಠಾಣೆ | | |
| ವಾಸ ಸ್ಥಳ | ಬ್ಯಾಡರಹಳ್ಳಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2020 ರಿಂದ 2025 ರವರೆಗೆ ಬ್ಯಾಡರಹಳ್ಳಿ ಠಾಣೆಯಲ್ಲಿ ಹೆಚ್.ಸಿ.ಯಾಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 25.02.2020 ರಂದು ಮೊಕದ್ದಮೆ ಸಂಖ್ಯೆ 45/2020 ರಲ್ಲಿ ಆರೋಪಿತರ ಪತ್ತೆಗಾಗಿ ನನ್ನನ್ನು, ಚಾಸಾ. 20 ರಿಂದ 22 ರವರನ್ನು ಪಿ.ಐ. ಶ್ರೀನಿವಾಸ್ ರವರು ಕರ್ತವ್ಯಕ್ಕೆ ನೇಮಕ ಮಾಡಿದ್ದು ಅದರಂತೆ ಬಾತ್ಮಿದಾರರಿಂದ ಮಾಹಿತಿ ಕಲೆಹಾಕಿದ್ದು ಆರೋಪಿತರು ಮಾಗಡಿ ಕಡೆಯಿಂದ ಪಲ್ಸರ್ ಬೈಕ್ ಸಂಖ್ಯೆ KA-01/HP-7173 ರಲ್ಲಿ ಬರುತ್ತಿರುವುದಾಗಿ ತಿಳಿಸಿದ ಮೇರೆಗೆ ನಾವು ನೈಸ್ ರೋಡ್ ಜಂಕ್ಷನ್ ನಲ್ಲಿ ಕಾದು ಬೆಳಿಗ್ಗ 8.30 ಕ್ಕೆ ವಶಕ್ಕೆ ಪಡೆದು ಸದರಿ ಇಬ್ಬರು ಆರೋಪಿತರನ್ನು ಬಗ್ಗೆ ವಿಚಾರಣೆ ಮಾಡಿದ್ದು ಅವರ ಹೆಸರು ಸುದರ್ಶನ್ ಮತ್ತು ಕುಮಾರ್ ಎಂದು ತಿಳಿಸಿದ್ದು ನಂತರ ಅವರನ್ನು ವಶಕ್ಕೆ ಪಡೆದು ಅವರಿಂದ 1 Samsung mobile, 1 vivo mobile ಮತ್ತು ಸದರಿ ವಾಹವನ್ನು ವಶಕ್ಕೆ ಪಡೆದುಕೊಂಡು ಪಿ.ಐ. ಶ್ರೀನಿವಾಸ್ ರವರ ಮುಂದೆ ವರದಿಯೊಂದಿಗೆ ಹಾಜರು ಪಡಿಸಿರುತ್ತೇನೆ. ಸದರಿ ವರಿದಿಯನ್ನು ನಿಶಾನೆ.ಪಿ. 23 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 23 (ಎ) ಎಂದು ಗುರುತಿಸಲಾಯಿತು.

2. ದಿನಾಂಕ 29.02.2020 ರಂದು ಇದೆ ಪ್ರಕರಣದಲ್ಲಿ ಉಳಿದ ಆರೋಪಿತರ ಪತ್ತೆಗಾಗಿ ನನ್ನನ್ನು, ಚಾಸಾ. 20 ರಿಂದ 22 ರವರನ್ನು ಪಿ.ಐ. ಶ್ರೀನಿವಾಸ್ ರವರು ಕರ್ತವ್ಯಕ್ಕೆ ನೇಮಕ ಮಾಡಿದ್ದು ಅದರಂತೆ

ಬಾತ್ಮಿದಾರರಿಂದ ಮಾಹಿತಿ ಕಲೆಹಾಕಿದ್ದು ಆರೋಪಿತರು ಮಾಹದೇಶ್ವರ ನಗರ ಪೈಪ್ ಲೈನ್ ರಸ್ತೆಯಲ್ಲ ಪಲ್ಸರ್ ಬೈಕ್ ಸಂಖ್ಯೆ KA-02/HR-5966 ರಲ್ಲಿ ಇರುವುದಾಗಿ ತಿಳಿಸಿದ ಮೇರೆಗೆ ನಾವು ಮೇಲ್ಕಂಡ ಬೆಳಿಗ್ಗ 9.15 ಕ್ಕೆ ಹೋಗಿ ನೋಡಲಾಗಿ ಅಲ್ಲಿ 3 ಜನರು ಇದ್ದು ಸದರಿ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದ್ದು ಅವರ ಹೆಸರು ನವೀನ್, ಅವಿನಾಶ್ ಮತ್ತು ಮನೋಹರ್ ಎಂದು ತಿಳಿಸಿದ್ದು ನಂತರ ಅವರನ್ನು ವಶಕ್ಕೆ ಪಡೆದು ವಾಹನದ ಸಮೇತ ಪಿ.ಐ. ಶ್ರೀನಿವಾಸ್ ರವರ ಮುಂದೆ ವರದಿಯೊಂದಿಗೆ ಹಾಜರು ಪಡಿಸಿರುತ್ತೇನೆ. ಸದರಿ ವರಿದಿಯನ್ನು ನಿಶಾನೆ.ಪಿ. 24 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 24 (ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ. 3 ರಿಂದ 5 ರವರನ್ನು ಸಾಕ್ಷಿ ನೋಡಿ ಗುರುತಿಸಿತ್ತಾರೆ. ಆರೋಪಿ ನಂ. 1 ಮತ್ತು 2 ರವರನ್ನು ಗುರುತಿಸುವ ಬಗ್ಗೆ ಆಕ್ಷೇಪಣೆ ಇಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ಈಗ ಫೋಟೋವನ್ನು ತೋರಿಸಿದ್ದು ಅದನ್ನು ಸಾಕ್ಷಿ ಗುರುತಿಸಿದ್ದು ಅದನ್ನುನಿಶಾನೆ.ಪಿ. 25 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **HK** ವಕೀಲರಿಂದ :

ದಿನಾಂಕ 25.02.2020 ರಂದು ಆರೋಪಿ ನಂ. 3 ಮತ್ತ 4 ರವರ ಪತ್ತೆಗಾಗಿ ಮತ್ತು ದಿನಾಂಕ 29.02.2020 ರಂದು ಆರೋಪಿ ನಂ. 1, 2 ಮತ್ತು 5 ರವರ ಪತ್ತೆಗಾಗಿ ಪಿ.ಐ. ರವರು ನಮಗೆ ನೇಮಿಸಿದ್ದರು. ಸದರಿ ಸಮಯದಲ್ಲಿ ಪಿ.ಐ. ರವರು ಆರೋಪಿತರ ಚಹರೆ ಬಗ್ಗೆ ಮಾಹಿತಿ ನೀಡಿದ್ದರು. ನನ್ನ ಹೇಳಿಕೆಯಲ್ಲಿ ಎಲ್ಲೂ ಆರೋಪಿತರ ಚಹರೆ ಕೊಟ್ಟ ಬಗ್ಗೆ ನಮೂದು ಮಾಡಿಲ್ಲ. ಯಾವ ಆರೋಪಿಯನ್ನು ಯಾವ ಸಿಬ್ಬಂದಿ ಹಿಡಿದುಕೊಂಡರು ಎಂದು ಹೇಳಲು ಬರುವುದಿಲ್ಲ. ನಾವು ಆರೋಪಿತರು ಆ ಸ್ಥಳಗಳಲ್ಲಿ ಹಿಡಿದುಕೊಂಡು ಬಂದಿಲ್ಲ ಆದ್ದರಿಂದ ನನಗೆ ಯಾರು ಯಾರನ್ನು ಹಿಡಿದರು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ ಅಲ್ಲ. ಆರೋಪಿತನ್ನು ವಶಕ್ಕೆ ಪಡೆದ ಜಾಗದಲ್ಲಿ ಸ್ಥಳೀಯರ ಹೇಳಿಕೆ ದಾಖಲು ಮಾಡಿಲ್ಲ. ಆರೋಪಿತನ್ನು ಠಾಣೆಗೆ ವಿಚಾರಣೆಗೆ ಕರೆಯಿಸಿ ವಶಕ್ಕೆ ಪಡೆದೆವು ಎಂದರೆ ಸರಿ ಅಲ್ಲ. ಈ ಕೇಸಿಗೋಸ್ಕರ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.